494 ಶ್ರೀ ಮಂಜುನಾಥ್ ಹೆಚ್.ಪಿ (ಹುಣಸೂರು) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ ಹುಣಸೂರು ಪಟ್ಟಣದಲ್ಲಿ ಕೊಳಚೆ ಪ್ರದೇಶಗಳನ್ನು ಗುರುತಿಸಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಅದರ ಸಂಖ್ಯೆ ಎಷ್ಟು ಮತ್ತು ಗುರುತಿಸಿದ ನಂತರ ಅವುಗಳ ಅಭಿವೃದ್ಧಿಗಾಗಿ ಈವರೆಗೂ ಏನೇನು ಕ್ರಮ ಕೈಗೊಳ್ಳಲಾಗಿದೆ, (ಮಂಜೂರಾಗಿರುವ ಅನುದಾನ ಹಾಗೂ ಕಾಮಗಾರಿವಾರು ವಿವರ ನೀಡುವುದು)?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಯವರು) :

ಅ) ಹೌದು.

ಆ) ಹುಣಸೂರು ಪಟ್ಟಣದಲ್ಲಿ 16 ಕೊಳಚೆ ಪ್ರದೇಶಗಳನ್ನು ಮಂಡಳಿ ಕಾಯ್ದೆಯಡಿಯಲ್ಲಿ ಘೋಷಿಸಲಾಗಿರುತ್ತದೆ. ಅವುಗಳ ಅಭಿವೃದ್ಧಿಗಾಗಿ ಮಂಡಳಿ ವತಿಯಿಂದ ಕೈಗೊಂಡಿರುವ ಕಾಮಗಾರಿಯ ವಿವರಗಳು ಈ ಕೆಳಕಂಡಂತಿವೆ.

ಕೊಳಚೆ ಪ್ರದೇಶದ ಹೆಸರು	ಕಾಮಗಾರಿಯ ವಿವರ	ಯೋಜನೆ	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
ಸರಸ್ವತಿ ಕಾಲೋನಿ	ಸಾಮೂಹಿಕ ಶೌಚಾಲಯ	ನಿರ್ಮಲ್ ಭಾರತ್ ಅಭಿಯಾನ್	4.00
ರತ್ನಪುರಿ ಆಶ್ರಯ ಬಡಾವಣೆ	116 ಮನೆಗಳು	ವಾಂಬೆ ಯೋಜನೆ	64.00
ಆರಂಗಿ ಕಾಲೋನಿ ಕೊಳಚೆ ಪ್ರದೇಶ	SSM ಚರಂಡಿ	ಕೊಳಚೆ ಅಭಿವೃದ್ಧಿ	10.00
ಶಬ್ಬೀರ್ ನಗರ	SSM ಚರಂಡಿ	ಕೊಳಚೆ ಅಭಿವೃದ್ಧಿ	10.00